**ಪಿಡಬ್ಲ್ಯು - 8**

**ಅರ್ಜಿಯಲ್ಲಿನ ಆದೇಶದ ಮೇರೆಗೆ, ಪಿಡಬ್ಲ್ಯು-8, ಸವಿತಾ ರವರನ್ನು ರೂ. 300/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 03.08.2024.**

**ಮುಂದುವರೆದ ಪಾಟಿ ಸವಾಲುಃ ಶ್ರೀ ಎಂ.ಎ. ಮೌಲ್ವಿ, ಆರೋಪಿತರ ಪರ ವಕೀಲರಿಂದಃ**

18. 1 ನೇ ಆರೋಪಿಯ ಜಮೀನಿನ ಪೂರ್ವ ದಿಕ್ಕಿಗೆ ಐನ್ಯಾರ ಹೊಲ ಇರುತ್ತದೆ. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಸದರಿ ಜಮೀನನ್ನು ಹರಗುತ್ತಿದ್ದರು. ಸದರಿ ಐನ್ಯಾರ ಇವರು ತಮ್ಮ ಹೊಲವನ್ನು ಬೇರೆಯವರ ಕಡೆಯಿಂದ ಟ್ರ್ಯಾಕ್ಟರದಿಂದ ಹರಗಿಸುತ್ತಾರೆ. ಹರಗುವ ಕೆಲಸವನ್ನು ಬೆಳಿಗ್ಗೆ 08.00 ಗಂಟೆಯಿಂದ ಪ್ರಾರಂಭಿಸುತ್ತಾರೆ. ಹರಗುವ ಕೆಲಸಕ್ಕೆ 4 – 5 ಜನರು ಬೇಕಾಗುತ್ತಾರೆ ಎಂದರೆ ಸಾಕ್ಷಿಯು ಮೂರು ಜನರು ಬೇಕಾಗುತ್ತಾರೆ ಎಂದು ಹೇಳಿರುತ್ತಾರೆ.

19. 1 ನೇ ಆರೋಪಿಯ ಜಮೀನಿನ ದಕ್ಷಿಣ ದಿಕ್ಕಿಗೆ ಯಾರ ಹೊಲ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಐನ್ಯಾರ ಹೊಲಕ್ಕೆ ರಸ್ತೆಯ ಮೂಲಕ ಹೋಗುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ 1 ನೇ ಆರೋಪಿಯ ಜಮೀನಿನ ದಕ್ಷಿಣಕ್ಕೆ ಇರುವ ಹೊಲದಲ್ಲಿ ಏನು ಕೆಲಸ ನಡೆದಿತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಜಮೀನಿನಲ್ಲಿ ನಿಂತರೆ, ಅವರ ಹೊಲದ ದಕ್ಷಿಣಕ್ಕೆ ಇರುವ ಹೊಲದಲ್ಲಿ ಏನು ನಡೆಯುತ್ತಿದೆ ಎಂದು ಕಾಣಿಸುತ್ತದೆ ಎಂದರೆ ಸರಿ. ಸದರಿ ಐನ್ಯಾರ ಹೊಲದಲ್ಲಿ ನಿಂತರೆ 1 ನೇ ಆರೋಪಿ ಜಮೀನಿನಲ್ಲಿ ಏನು ನಡೆಯುತ್ತದೆ ಎಂದು ಕಾಣಿಸುತ್ತದೆ.

20. ನಮ್ಮ ಮನೆಯ ಒಳಗಡೆ ಇದ್ದರೆ, ಸದರಿ ಐನ್ಯಾರ ಹೊಲದಲ್ಲಿ ಏನು ನಡೆಯುತ್ತದೆ ಎಂದು ಕಾಣಿಸುತ್ತದೆ. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಸದರಿ ಐನ್ಯಾರ ಹೊಲದಲ್ಲಿ ಕೆಲಸ ಮಾಡುತ್ತಿದ್ದವರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಐನ್ಯಾರ ಹೊಲದಲ್ಲಿ ಕೆಲಸ ಮಾಡುತ್ತಿರುವವರು ಬಹಳ ವರ್ಷಗಳಿಂದ ಅವರ ಹೊಲದಲ್ಲಿಯೇ ಕೆಲಸ ಮಾಡುತ್ತಾರೆ. ಸದರಿ ಐನ್ಯಾರ ಹೊಲದಲ್ಲಿ ಹರಗುತ್ತಿದ್ದ ಟ್ರ್ಯಾಕ್ಟರ ಮಹಿಂದ್ರ ಕಂಪನಿಯ ಟ್ರ್ಯಾಕ್ಟರ ಆಗಿತ್ತು. ಸದರಿ ಟ್ರ್ಯಾಕ್ಟರಿನ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಟ್ರ್ಯಾಕ್ಟರಿನಲ್ಲಿ ಕುಳಿತವರು ಯಾರು ಎಂದು ಗುರುತಾಗುತ್ತಿತ್ತಾ ಎಂದರೆ ಸಾಕ್ಷಿಯು, ಅವರು ಶಾಂತಗೇರಿ ಗ್ರಾಮದವರು ಆಗಿರುತ್ತಾರೆ ಎಂದು ಹೇಳಿರುತ್ತಾರೆ.

21. ನಮ್ಮ ಮನೆಯಲ್ಲಿ ಟ್ರ್ಯಾಕ್ಟರ ಇರುವುದಿಲ್ಲ. ನಮ್ಮ ಹೊಲದ ಕೆಲಸವನ್ನು ಊರಿನಲ್ಲಿಯ ಟ್ರ್ಯಾಕ್ಟರನ್ನು ಬಾಡಿಗೆಗೆ ತೆಗೆದುಕೊಂಡು ಕೆಲಸ ಮಾಡಿಸುತ್ತೇವೆ. ಪ್ರತಿಯೊಬ್ಬ ರೈತರ ಮನೆಗಳಲ್ಲಿ ಕೊಡ್ಲಿ,

ಬಾಯಿಗುದ್ಲಿ, ಬಡಿಗೆ ಇರುತ್ತವೆ ಎಂದರೆ ಸರಿ. ಅವುಗಳು ನಮ್ಮ ಮನೆಯಲ್ಲಿ ಕೂಡಾ ಇರುತ್ತವೆ. ನಮ್ಮ ಮನೆಯಲ್ಲಿದ್ದ ಕೊಡ್ಲಿ ಮತ್ತು ಬಾಯಿಗುದ್ಲಿ ಎಷ್ಟು ಉದ್ದ ಮತ್ತು ದಪ್ಪನೆಯದಾಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ.

22. ನಾನು ಟ್ರ್ಯಾಕ್ಟರನಿಂದ ಹರಗುವುದನ್ನು ನೋಡಿರುತ್ತೇನೆ. ಗಟ್ಟಿ ಜಮೀನು ಇದ್ದರೆ ಹರಗುವ ಸಮಯದಲ್ಲಿ ಟ್ರ್ಯಾಕ್ಟರನ ಕುಂಟೆಯ ಮೇಲೆ ಇಬ್ಬರು ವ್ಯಕ್ತಿಗಳು ಕುಳಿತುಕೊಳ್ಳುತ್ತಾರೆ ಎಂದರೆ ಸರಿ. ಆ ರೀತಿ ಟ್ರ್ಯಾಕ್ಟರನಿಂದ ಹರಗುವ ಸಮಯದಲ್ಲಿ ಕುಂಟೆಗೆ ಮಣ್ಣು ಹತ್ತಿಕೊಳ್ಳುತ್ತದೆ ಎಂದರೆ ಸರಿ. ಆ ರೀತಿ ಟ್ರ್ಯಾಕ್ಟರನಿಂದ ಹರಗುವ ಸಮಯದಲ್ಲಿ ಕುಂಟೆಗೆ ಒಬ್ಬ ಮನುಷ್ಯ ಸಿಕ್ಕರೆ, ಆತನ ದೇಹವು ಛಿದ್ರ ಛಿದ್ರವಾಗುತ್ತದೆ ಎಂದರೆ ಸರಿ.

23. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ, ನಾನು ಮನೆಯಲ್ಲಿ ರೊಟ್ಟಿ ಮಾಡುತ್ತಿದ್ದೆನು ಮತ್ತು ಪ್ರಾಸಾ-1 ರವರು ಬಟ್ಟೆ ಒಗೆಯುತ್ತಿದ್ದರು ಮತ್ತು ಆ ಸಮಯದಲ್ಲಿ ಮೃತ ಮಲ್ಲಪ್ಪನು ಮನೆಯ ಮುಂದಿನ ನಳದಿಂದ ನೀರು ತುಂಬುತ್ತಿದ್ದನು ಮತ್ತು ಮೃತ ನೀಲವ್ವ ಇವರು ಮನೆಯ ಹಾಲನಲ್ಲಿ ಮೂರು ಜನ ಮಕ್ಕಳಾದ ದೀಪಾ, ರೇಣುಕಾ ಮತ್ತು ಹನಮವ್ವ ಇವರನ್ನು ಮನೆಯಲ್ಲಿ ಆಟವಾಡಿಸುತ್ತಿದ್ದರು. ನಮ್ಮ ಮನೆಯ ಮುಂಭಾಗದಲ್ಲಿ ಹಾಲ್ ಇರುತ್ತದೆ ಮತ್ತು ಹಾಲ್ ನ ಹಿಂಭಾಗದಲ್ಲಿ ಅಡುಗೆ ಮನೆ ಇರುತ್ತದೆ. ಸದರಿ ಹಾಲ್ ನ ದಕ್ಷಿಣ ದಿಕ್ಕಿಗೆ ರೂಮ ಇರುತ್ತದೆ. ಆ ಸಮಯದಲ್ಲಿ, ಪ್ರಾಸಾ-9 ರವರು ಊಟ ಮಾಡುತ್ತಿದ್ದರು. ಆ ಸಮಯದಲ್ಲಿ ಮೃತ ನೀಲವ್ವ ಮತ್ತು ಮೃತ ಮಲ್ಲಪ್ಪ ಇವರು ಇನ್ನೂ ಊಟ ಮಾಡಿರಲಿಲ್ಲ ಮತ್ತು ಅವರು ರಾತ್ರಿ ಊಟ ಮಾಡಿದ್ದರು.

24. ನಾನು ರೊಟ್ಟಿ ಮಾಡುತ್ತಿದ್ದ ಸ್ಥಳದಿಂದ ಹಾಲ್ ನಲ್ಲಿ ಮತ್ತು ಮನೆಯ ಮುಂದುಗಡೆ ಏನು ನಡೆಯುತ್ತದೆ ಎಂಬುದು ಕಾಣಿಸುತ್ತದೆ. ನಾನು ರೊಟ್ಟಿ ಮಾಡುತ್ತಿದ್ದ ಸ್ಥಳದಿಂದ ನಮ್ಮ ಮನೆಯ ಹಿಂದುಗಡೆ ಏನು ನಡೆಯುತ್ತದೆ ಎಂಬುದು ಕಾಣಿಸುವುದಿಲ್ಲ. ಸಾಕ್ಷಿಯು ಸ್ವತಃ ನಿಂತರೆ ಮನೆಯ ಹಿಂದೆ ನಡೆಯುವುದು ಕಾಣಿಸುತ್ತದೆ ಎಂದು ಹೇಳಿರುತ್ತಾರೆ.

25. ಮೃತ ನೀಲವ್ವ ಮತ್ತು ಮೃತ ಮಲ್ಲಪ್ಪ ಇವರು ಮನೆಯಿಂದ ಹೊಲಕ್ಕೆ ಹೋಗುವಾಗ ನನಗೆ ಹೇಳಿ ಹೋಗಿರುತ್ತಾರೆ. ಆಗ ಮೂರು ಜನ ಮಕ್ಕಳಾದ ದೀಪಾ, ರೇಣುಕಾ ಮತ್ತು ಹನಮವ್ವ ಇವರೂ ಕೂಡಾ ಮೃತ ನೀಲವ್ವನ ಜೊತೆ ಹೊರಗೆ ಹೋಗಿರುತ್ತಾರೆ. ನಾನು ಮನೆಯಿಂದ ಹೊಲಕ್ಕೆ ಹೋಗುವಾಗ, ಮನೆಯಲ್ಲಿ ಇದ್ದವರೆಲ್ಲಾ ಹೊಲಕ್ಕೆ ಹೋಗಿದ್ದರು.

26. ನಮ್ಮ ಮನೆಯಿಂದ ರಸ್ತೆಯು ಸುಮಾರು 15 ಫೂಟು ದೂರದಲ್ಲಿ ಇರುತ್ತದೆ. ನಮ್ಮ ಮನೆಯಲ್ಲಿ ಕುಳಿತವರಿಗೆ ರಸ್ತೆಯಲ್ಲಿ ಮಾತನಾಡುವುದು ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಹೊಲಕ್ಕೆ ಹೋಗುವುದಕ್ಕಿಂತ ಮೊದಲು, ಮನೆಯ ಮುಂದೆ ರಸ್ತೆಯ ಮೇಲೆ ಯಾರೂ ಏನನ್ನು

ಮಾತನಾಡುತ್ತಿರಲಿಲ್ಲ.

27. ನಮ್ಮ ಮನೆಯಿಂದ 1 ನೇ ಆರೋಪಿಯ ಹೊಲಕ್ಕೆ ಹೋಗಬೇಕಾದರೆ, ಶಾಂತಗೇರಿ ರಸ್ತೆಯ ಮೂಲಕ ಹೋಗಬೇಕಾಗುತ್ತದೆ. 1 ನೇ ಆರೋಪಿಯ ಜಮೀನು ಶಾಂತಗೇರಿ ರಸ್ತೆಗೆ ಹೊಂದಿಕೊಂಡು ಇರುತ್ತದೆ. ನಾನು ಘಟನಾ ಸ್ಥಳಕ್ಕೆ ಹೋಗುವುದಕ್ಕಿಂತ ಮೊದಲು ಅಲ್ಲಿ ಬಹಳಷ್ಟು ಜನರು ಸೇರಿದ್ದರು. ನಾನು ಘಟನಾ ಸ್ಥಳಕ್ಕೆ ಹೋದಾಗ, ಸಮಯ ಬೆಳಿಗ್ಗೆ 09.30 ಗಂಟೆಯಾಗಿತ್ತು. ನಾನು ಘಟನಾ ಸ್ಥಳಕ್ಕೆ ಹೋಗುವಾಗ, ನಾನು ಸಮಯವನ್ನು ನೋಡಿ ಹೋಗಿದ್ದೆನು. ಘಟನಾ ಸ್ಥಳದಲ್ಲಿ ಸೇರಿದ್ದ ಬಹಳಷ್ಟು ಜನರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ರಸ್ತೆಯ ಮೇಲೆ ಬಹಳಷ್ಟು ಜನರು ಇದ್ದರು. ಹೊಲದಲ್ಲಿ ಮೃತ ನೀಲವ್ವ ಮತ್ತು 1 ರಿಂದ 3 ನೇ ಆರೋಪಿಗಳು, ಶಿವವ್ವ ಕಿಡಿಯಪ್ಪನವರ, ಸಾವಿತ್ರಿ ಕಿಡಿಯಪ್ಪನವರ, ಲಲಿತಾ ಕಿಡಿಯಪ್ಪನವರ ಮತ್ತು ರೇಖಾ ಕಿಡಿಯಪ್ಪನವರ ಇದ್ದರು. ಹೊಲದಲ್ಲಿ ಇವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ.

28. ನಾನು ಘಟನಾ ಸ್ಥಳಕ್ಕೆ ಹೋಗುವಾಗ, ರಸ್ತೆಯ ಮೇಲೆ ಇದ್ದವರು ಅವರನ್ನು ಕಡಿಯಬೇಡಿರಿ, ಹೊಡೆಯ ಬೇಡಿರಿ ಎಂದು ಹೇಳುತ್ತಿದ್ದರು. ರಸ್ತೆಯ ಮೇಲೆ ಸುಮಾರು 50 ಜನರು ಇದ್ದರು. ಈ 50 ಜನರ ಪೈಕಿ, ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳು ಕಡಿಯಬೇಡಿರಿ, ಹೊಡೆಯಬೇಡಿರಿ ಎಂದು ಹೇಳುತ್ತಿದ್ದರು. ಸದರಿ ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳ ಪಕ್ಕದಲ್ಲಿ ನಿಂತವರು ಬಹಳ ಜನರು ಇದ್ದುದರಿಂದ, ಅವರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳ ಹಿಂದೆ ಮತ್ತು ಮುಂದೆ ಯಾರು ನಿಂತಿದ್ದರು ಎಂದು ಅವರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳ ಮುಂದೆ 20 ರಿಂದ 25 ಜನರು ಮತ್ತು ಹಿಂದೆ 20 ರಿಂದ 25 ಜನರು ನಿಂತುಕೊಂಡಿದ್ದರು.

29. ಘಟನಾ ಸ್ಥಳದ ಹೊಲಕ್ಕೆ ಹೊಂದಿಕೊಂಡು ಸದರಿ ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳ ಮನೆಗಳು ಇರುವುದಿಲ್ಲ. ಸದರಿ ಐನ್ಯಾರ ಮಹೇಶ ಇವರ ಮನೆಯು, ನಮ್ಮ ಮನೆಯ ಪಶ್ಚಿಮಕ್ಕೆ ಚಂದ್ರಶೇಖರ ನೀಲಗುಂದ ಮಠ ಮತ್ತು ಈರಮ್ಮ ಪೂಜಾರ ಇವರ ಮನೆಗಳನ್ನು ಬಿಟ್ಟು ಇರುತ್ತದೆ.

30. ಮುತ್ತಪ್ಪ ಮಾದರ ಇವರ ಮನೆಯು ದುರಗಮ್ಮನ ಗುಡಿಯ ಹತ್ತಿರ ಇರುವ ಮಾದರ

ಕೇರಿಯಲ್ಲಿ ಇರುತ್ತದೆ. ಸದರಿ ಮನೆಯು ಘಟನಾ ಸ್ಥಳದಿಂದ ದೂರದಲ್ಲಿ ಇರುತ್ತದೆ ಎಂದರೆ ಸರಿ. ಮುತ್ತಪ್ಪ ಲಗಳಿ ಇವರ ಮನೆಯು ನಮ್ಮ ಊರಿನ ಗುಡ್ಡಕ್ಕೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿಯಲ್ಲ. ಮುತ್ತಪ್ಪ ಲಗಳಿ ಇವರ ಮನೆಯ ಘಟನಾ ಸ್ಥಳದ ಹೊಲಕ್ಕೆ ಹೊಂದಿಕೊಂಡು ಇರುತ್ತದೆ. ಮುತ್ತಪ್ಪ ಲಗಳಿ ಇವರ ಮನೆಯ ಘಟನಾ ಸ್ಥಳದ ಹೊಲಕ್ಕೆ ಹೊಂದಿಕೊಂಡು ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗನಗೌಡ ಅಂಡರದಾನಿ ಇವರ ಮನೆಯು ಊರ ನಡುವೆ ಇರುತ್ತದೆ.

31. ಘಟನಾ ಸ್ಥಳದ ಹೊಲಕ್ಕೆ ಹೊಂದಿಕೊಂಡು ಸದರಿ ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳ ಮನೆಗಳು ಇರುವುದಿಲ್ಲ. ಸದರಿ ಐನ್ಯಾರ ಮಹೇಶ ಇವರ ಜಮೀನುಗಳು ಇರುವುದಿಲ್ಲ ಎಂದರೆ ಸರಿ.

32. ನಾನು ಮನೆಯಿಂದ ಹೊರಗೆ ಬಂದಾಗ, ರಸ್ತೆಯ ಮೇಲೆ ನಿಂತ ಜನರು ಹತ್ತಿರದಲ್ಲಿ ಇದ್ದರೋ ಅಥವಾ ಹೊಲದಲ್ಲಿ ಇದ್ದವರು ಹತ್ತಿರದಲ್ಲಿ ಇದ್ದರೋ ಎಂದರೆ ಸಾಕ್ಷಿಯು ಎರಡೂ ಕಡೆಯವರು ಒಂದೇ ಅಂತರದಲ್ಲಿ ಇದ್ದರು ಎಂದು ಹೇಳಿರುತ್ತಾರೆ. ರಸ್ತೆಯ ಮೇಲೆ ನಿಂತ ಜನರ ಕೈಗಳಲ್ಲಿ ಏನು ಇದ್ದವು ಎಂದರೆ ಸಾಕ್ಷಿಯು ಏನೂ ಇರಲಿಲ್ಲ ಎಂದು ಹೇಳಿರುತ್ತಾರೆ. ರಸ್ತೆಯ ಮೇಲೆ ನಿಂತ ಜನರು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಮೂರೂ ಜನ ಆರೋಪಿಗಳು ಬಿಳಿ ಬಣ್ಣದ ಬನಿಯನಗಳನ್ನು ಹಾಗೂ ನೀಲಿ, ಚಾಕಲೇಟ ಮತ್ತು ಹಳದಿ ಬಣ್ಣದ ಲುಂಗಿಗಳನ್ನು ಧರಿಸಿದ್ದರು.

33. ನಾನು ಮೃತ ನೀಲವ್ವ ಮತ್ತು ಮೃತ ಮಲ್ಲಪ್ಪ ಇಬ್ಬರ ಹತ್ತಿರ ಹೋಗಿ ಅವರನ್ನು ಅಪ್ಪಿಕೊಳ್ಳುವುದು ಮತ್ತು ಅವರನ್ನು ತೊಡೆಯ ಮೇಲೆ ಮಲಗಿಸಿಕೊಳ್ಳುವುದನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮೃತ ನೀಲವ್ವ ಮೃತಪಟ್ಟಿದ್ದರು ಮತ್ತು ಮೃತ ಮಲ್ಲಪ್ಪನಿಗೆ ನೀರು ಕುಡಿಸಿ, ಮಾತನಾಡಿಸುವುದು ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ನಾನೇ ಮನೆಗೆ ಹೋಗಿ ನೀರನ್ನು ತೆಗೆದುಕೆಂಡು ಬಂದಿರುತ್ತೇನೆ. ನನ್ನ ಬಟ್ಟೆಗೆಲ್ಲಾ ರಕ್ತ ಆಗಿತ್ತು. ಸದರಿ ಹೊಲದಲ್ಲಿ ಮಡಿಕೆಯನ್ನು ಮೂರು ಸಾಲುಗಳನ್ನು ಉತ್ತರದಿಂದ ದಕ್ಷಿಣಕ್ಕೆ ಹೊಡೆಯಲಾಗಿತ್ತು. ಸದರಿ ಹೊಲದಲ್ಲಿ ಮಡಿಕೆಯನ್ನು ಹೊಡೆಯುವ ಮೊದಲು ಜೋಳವನ್ನು ಬೆಳೆಯಲಾಗಿತ್ತು. ಜೋಳದ ಕಟಾವ್ ಆಗಿತ್ತು. ಸದರಿ ಜೋಳದ ಬೆಳೆಯನ್ನು 1 ನೇ ಆರೋಪಿ ಆಳುಗಳಿಂದ ಕಟಾವ್ ಮಾಡಿಸಿದ್ದರು. ಆಗ ಜೋಳದ ಕೋಲು ಉಳಿದಿದ್ದವು ಎಂದರೆ ಸರಿಯಲ್ಲ.

34. ಘಟನಾ ಸ್ಥಳದ ಹೊಲದ ಪಶ್ಚಿಮ ಭಾಗದಲ್ಲಿ ಮೃತ ನೀಲವ್ವಳ ಶವ ಇತ್ತು. ಮೃತ ನೀಲವ್ವಳ ಶವದ ಎದೆಯ ಭಾಗದಲ್ಲಿ ಮಣ್ಣು ಹತ್ತಿತ್ತು. ಸಾಕ್ಷಿ ಸ್ವತಃ ರಕ್ತ ಮತ್ತು ಮಣ್ಣು ಹತ್ತಿತ್ತು

ಎಂದು ಹೇಳಿರುತ್ತಾರೆ. ಸದರಿ ಹೊಲದಲ್ಲಿದ್ದ ಟ್ರ್ಯಾಕ್ಟರನ ಮಡಿಕೆಗೆ ರಕ್ತ ಹತ್ತಿತ್ತು. ಹೊಲದಲ್ಲಿ ಕೊಡ್ಲಿ ಮತ್ತು ಬಾಯಿ ಗುದ್ದಿ ಎಲ್ಲಿ ಬಿದ್ದಿದ್ದವು ಎಂದರೆ ಸಾಕ್ಷಿಯು ಆರೋಪಿಗಳ ಕೈಯಲ್ಲಿ ಇದ್ದವು ಎಂದು ಹೇಳಿರುತ್ತಾರೆ. ಕೊಡ್ಲಿಯನ್ನು ಟ್ರ್ಯಾಕ್ಟರನಲ್ಲಿ ಕಾಲನ್ನು ಇಡುವ ಕಡೆ ಇಟ್ಟುಕೊಂಡಿದ್ದರು. ಕೊಡ್ಲಿಯನ್ನು ಟ್ರ್ಯಾಕ್ಟರನಲ್ಲಿ ಕಾಲನ್ನು ಇಡುವ ಕಡೆ ಇಡಲಾಗಿತ್ತು ಎಂದು ನಾನು ತೋರಿಸಿರುವುದಿಲ್ಲ.

35. ನಾನು ಸದರಿ ಹೊಲದಲ್ಲಿ 5 ರಿಂದ 10 ನಿಮಿಷಗಳವರೆಗೆ ಇದ್ದೆನು. ಆ ಸಮಯದಲ್ಲಿ ಮೃತ ನೀಲವ್ವ ಮತ್ತು ಮೃತ ಮಲ್ಲಪ್ಪ ಇವರ ಶವಗಳನ್ನು ಹನಮಂತ ತುಗನಿ, ಶರಣಪ್ಪ ರಕ್ಕಸಗಿ, ಸೂಸಮ್ಮ ಶಾಂತಗೇರಿ, ಮುತ್ತಪ್ಪ ಲಗಳಿ, ಲಕ್ಷ್ಮವ್ವ ಲಗಳಿ ಮತ್ತು ನಾನು ಸೇರಿ ಆ್ಯಂಬುಲೆನ್ಸದಲ್ಲಿ ಹಾಕಿರುತ್ತೇವೆ. ಇವರೆಲ್ಲರ ಬಟ್ಟೆಗಳಿಗೆ ಕೂಡಾ ರಕ್ತ ಆಗಿತ್ತು. ಸದರಿ ಹನಮಂತ ತುಗನಿ ಇವರು ಆ್ಯಂಬುಲೆನ್ಸ ನ್ನು ಕರೆಸಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಜೊತೆ ಆಸ್ಪತ್ರೆಗೆ ಬೇರೆಯವರು ಕೂಡಾ ಬಂದಿದ್ದರು. ನನ್ನ ಗಂಡನ ಜೊತೆಗೆ ನಾನು ಆಸ್ಪತ್ರೆಯಲ್ಲಿ ಎರಡು ದಿನ ಇದ್ದೆನು. ಈ ಎರಡು ದಿನ ಆಸ್ಪತ್ರೆಯಲ್ಲಿ ನನ್ನ ಗಂಡನಿಗೆ ಡಾಃ ಶ್ರೀನಿವಾಸ ಎಂಬ ವೈದ್ಯರು ಚಿಕಿತ್ಸೆಯನ್ನು ಕೊಟ್ಟಿರುತ್ತಾರೆ. ಈ ಎರಡು ದಿನಗಳ ಅವಧಿಯಲ್ಲಿ ನಾನು ಆಸ್ಪತ್ರೆಯನ್ನು ಬಿಟ್ಟು ಎಲ್ಲಿಗೂ ಹೋಗಿರುವುದಿಲ್ಲ. 15 ದಿನಗಳ ನಂತರ ನನ್ನ ಗಂಡನು ಆಸ್ಪತ್ರೆಯಿಂದ ಡಿಸ್ ಚಾರ್ಜ ಆಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದಾಗ, ನಮ್ಮ ಸಂಬಂಧಿಕರು ಹಾಗೂ ಊರಿನವರು ಬಂದು ಭೇಟಿಯಾಗಿರುತ್ತಾರೆ. ಇವರನ್ನು ಹೊರತುಪಡಿಸಿ, ಬೇರೆ ಯಾರೂ ಭೇಟಿಯಾಗಿರುವುದಿಲ್ಲ.

36. ನಾನು ಎರಡು ದಿನ ಆಸ್ಪತ್ರೆಯಲ್ಲಿ ಇದ್ದು, ಮನೆಗೆ ವಾಪಸ್ ಬಂದ ನಂತರ, ನನ್ನ ಗಂಡನು ಡಿಸ್ ಚಾರ್ಜ ಆಗುವವರೆಗೂ ನಾನು ಮನೆ ಬಿಟ್ಟು ಎಲ್ಲಿಗೂ ಹೋಗಿರುವುದಿಲ್ಲ. ಈ ಅವಧಿಯಲ್ಲಿ ಊರಿನ ಜನರು ನಮ್ಮ ಮನೆಗೆ ಬಂದು ಮಾತನಾಡಿಸಿಕೊಂಡು ಹೋಗಿರುತ್ತಾರೆ. ನನ್ನ ಗಂಡನು ಆಸ್ಪತ್ರೆಯಲ್ಲಿ ಇದ್ದಾಗ, ಆತನನ್ನು ಶರಣಪ್ಪ ರಕ್ಕಸಗಿ ಹಾಗೂ ಶರಣಪ್ಪ ಶಿರಗುಪ್ಪಿ ಎಂಬುವವರು ನೋಡಿಕೊಳ್ಳುತ್ತಿದ್ದರು.

37. ಪ್ರಾಸಾ-7 ರವರು ಆಸ್ಪತ್ರೆಗೆ ಹೋಗಿ ಬರುವುದು ಮಾಡುತ್ತಿದ್ದರು. ಪ್ರಾಸಾ-7 ರವರು ಆಸ್ಪತ್ರೆಯನ್ನು ಬಿಟ್ಟು ಬೇರೆ ಎಲ್ಲಿಗೂ ಹೋಗಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಾಸಾ-7 ರವರು ರೋಣ ಪೋಲೀಸ ಠಾಣೆಗೆ ಹೋಗಿದ್ದೆನು ಎಂದು ಹೇಳಿರುತ್ತಾರೆ. ನನ್ನ ಗಂಡನು ಡಿಸ್ ಚಾರ್ಜ ಆದ 8 ದಿನಕ್ಕೆ ಪ್ರಾಸಾ-7 ರವರು ರೋಣ ಪೋಲೀಸ ಠಾಣೆಗೆ ಹೋಗಿರುತ್ತಾರೆ. ನನ್ನ ಗಂಡನು ಡಿಸ್ ಚಾರ್ಜ ಆದ ಎರಡು ವರ್ಷಗಳ ವೆರೆಗೆ ಮನೆಯನ್ನು ಬಿಟ್ಟು ಎಲ್ಲಿಗೂ ಹೋಗಿರುವುದಿಲ್ಲ. ನನ್ನ ಗಂಡನಿಗೆ ಮಾರನೇ ದಿನವೇ ಪ್ರಜ್ಞೆ ಬಂದಿರುತ್ತದೆ. ನನ್ನ ಗಂಡನು ಡಿಸ್ ಚಾರ್ಜ ಆದ 8 ದಿನಕ್ಕೆ ಪ್ರಾಸಾ-7 ರವರು ರೋಣ ಪೋಲೀಸ ಠಾಣೆಗೆ ಹೋಗಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.

38. ನಾನು ಮನೆಯಿಂದ ಬೆಳಿಗ್ಗೆ 09.30 ಗಂಟೆಗೆ ಹೋಗಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯಿಂದ ಹೊರಗೆ ಬಂದಾಗ, ರಸ್ತೆಯ ಮೇಲೆ 50 ಜನರು ಇದ್ದರು ಮತ್ತು ಅವರಲ್ಲಿ ಮುತ್ತಪ್ಪ ಲಗಳಿ, ಬಸಮ್ಮ ಲಗಳಿ, ನಿಂಗನಗೌಡ ಅಂಡರದಾನಿ, ಧೂಳಪ್ಪ ಗಡಗಿ, ಮುತ್ತಪ್ಪ ಮಾದರ, ಐನ್ಯಾರ ಮಹೇಶ ಇವರುಗಳು ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

39. ನಾನು ಹೊಲಕ್ಕೆ ಹೋದಾಗ, ಅಲ್ಲಿ ಆರೋಪಿಗಳ ಟ್ರ್ಯಾಕ್ಟರ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ಟ್ರ್ಯಾಕ್ಟರನ ಮಡಿಕೆಗೆ ರಕ್ತ ಹತ್ತಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ಕೈಯಲ್ಲಿ ಕೊಡ್ಲಿ ಮತ್ತು ಬಾಯಿ ಗುದ್ಲಿಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿಗಳು ಬಿಳಿ ಬನಿಯನಗಳನ್ನು ಧರಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ 5 ರಿಂದ 10 ನಿಮಿಷ ಇದ್ದೆನು ಮತ್ತು ಶವಗಳನ್ನು ಆ್ಯಂಬುಲೆನ್ಸದಲ್ಲಿ ತೆಗೆದುಕೊಂಡು ಹೋಗಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವಗಳನ್ನು ಆ್ಯಂಬುಲೆನ್ಸದಲ್ಲಿ ಬದಾಮಿಗೆ ತೆಗೆದುಕೊಂಡು ಹೋಗಿರುತ್ತೇವೆ. ಆ ನಂತರ ಬಾಗಲಕೋಟಿಯ ಕೆಲ್ಲೂಡಿ ಆಸ್ಪತ್ರೆಗೆ ಹೋಗಿರುತ್ತೇವೆ. ಬಾಗಲಕೋಟಿಗೆ ಹೋದಾಗ, ಸಮಯ ಮದ್ಯಾಹ್ನ 01.30/02.00 ಗಂಟೆಯಾಗಿತ್ತು.

40. ನಾನು ಹೊಲಕ್ಕೆ ಹೋಗುವ ಮೊದಲು ನನ್ನ ಅತ್ತೆ ನೀಲವ್ವ, ನನ್ನ ಮಾವ ಮುತ್ತಪ್ಪ, ಭಾವ ಮಲ್ಲಪ್ಪ ಮತ್ತು ಆತನ ಹೆಂಡತಿ ಲಕ್ಷ್ಮವ್ವ ಮತ್ತು ನನ್ನ ಗಂಡ ಆನಂದ ಹೋಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

41. ನನ್ನ ಅತ್ತೆಯ ತಂದೆಗೆ ಗಂಡುಮಕ್ಕಳು ಇಲ್ಲದ ಕಾರಣ ನಮ್ಮ ಅತ್ತೆಯ ತಂದೆ 5 ಎಕರೆ ಜಮೀನನ್ನು ಮತ್ತು ಇತರೆ ಆಸ್ತಿಗಳನ್ನು ಇದ್ದು ಸದರಿ ಆಸ್ತಿಗಳು ಮೃತ ನನ್ನ ಅತ್ತೆಗೆ ಬರಬೇಕಾಗಿದ್ದು ಈ ಬಗ್ಗೆ ನನ್ನ ಅತ್ತೆ ನೀಲವ್ವ ಮತ್ತು ಅವಳ ತಂದೆಯ ಅಕ್ಕನ ಮೊಮ್ಮಕ್ಕಳಾದ ಅಂದರೆ 1 ರಿಂದ 3 ನೇ ಆರೋಪಿತರ ಮಧ್ಯ ತಕರಾರು ಇದ್ದು ಎಲ್ಲ ಜಮೀನು ಹಾಗೂ ಟ್ರ್ಯಾಕ್ಟರ ವಗೈರೆ ನಮಗೆ ಬರಬೇಕಾಗಿದ್ದು ಕೊಡುವುದಿಲ್ಲ ಎಂದು ಆರೋಪಿತರು ಸಾಧಿಸುತ್ತಿದ್ದರು ಮತ್ತು ಈ ಬಗ್ಗೆ ಊರಿನ ಹಿರಿಯರು ಪಂಚಾಯತಿ ಮಾಡಿ ಹೇಳಿದ್ದರೂ ಆರೋಪಿತರು ಜಮೀನು ಬಿಟ್ಟು ಕೊಟ್ಟಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

42. ಈಗ ನಾಲ್ಕು ವರ್ಷಗಳ ಹಿಂದೆ, ತಕರಾರು ಇದ್ದ ಜಮೀನಿನಲ್ಲಿ ಆರೋಪಿತರು ಸಾಗುವಳಿ

ಮಾಡಲು ಬಂದಿದ್ದಾರೆಂದು ತಿಳಿದು, ನನ್ನ ಅತ್ತೆ ಬೆಳಿಗ್ಗೆ 09.30 ಗಂಟೆಗೆ ಜಮೀನು ಕಡೆ ಹೋಗಿದ್ದರು ಮತ್ತು ಅವರು ಹೋದ ಸ್ವಲ್ಪ ಸಮಯದ ನಂತರ ಗಲಾಟೆ ಕೇಳಿ ನಾನು, ನನ್ನ ಅಕ್ಕ ಪ್ರಾಸಾ-1, ಪ್ರಾಸಾ-7 ಸದರಿ ಜಮೀನಿಗೆ ಹೋಗಿ ನೋಡಿದಾಗ, ಒಂದನೆ ಆರೋಪಿ ಪಡಿಯಪ್ಪ ಕೈಯಲ್ಲಿದ್ದ ಕೊಡ್ಲಿಯಿಂದ ಮೃತ ನನ್ನ ಅತ್ತೆ ನೀಲವ್ವಳ ಕೊರಳಿಗೆ ಹೊಡೆದನು ಮತ್ತು ಅವರು ನೆಲದ ಮೇಲೆ ಬಿದ್ದರು ಮತ್ತು ಎರಡನೆ ಆರೋಪಿ ಸದರಿ ಗಾಯಗೊಂಡ ನಮ್ಮ ಅತ್ತೆಯನ್ನು ಟ್ರ್ಯಾಕ್ಟರಗೆ ಜೋಡಿಸಿದ ಮಡಿಕೆಯಲ್ಲಿ ಎಳೆದುಕೊಂಡು ಹೋಗಿ ರಸ್ತೆಯ ಪಕ್ಕಕ್ಕೆ ಹಾಕಿದನು ಮತ್ತು ಆಗ ಮಲ್ಲಪ್ಪ ಗಲಾಟೆ ಬಿಡಿಸಲು ಹೋದಾಗ 1 ನೇ ಆರೋಪಿ ಕೊಡ್ಲಿಯಿಂದ ತಲೆಗೆ ಹೊಡೆದನು ಮತ್ತು ಎರಡನೆ ಆರೋಪಿ ಶರಣಪ್ಪ ಕೂಡಾ ಕೊಡ್ಲಿಯಿಂದ ತಲೆಗೆ ಹೊಡೆದನು ಮತ್ತು ಆತ ಕೂಡಾ ಗಾಯಗೊಂಡು ಕೆಳಗೆ ಬಿದ್ದನು ಮತ್ತು ಆಗ ನನ್ನ ಗಂಡ ಆನಂದ ಬಿಡಿಸಲು ಹೋದಾಗ 3 ನೇ ಆರೋಪಿ ನನ್ನ ಗಂಡನ ತಲೆಗೆ ಬಾಯಿಗುದ್ಲಿಯಿಂದ ಹೊಡೆದನು ಮತ್ತು ಇದರಿಂದ ನನ್ನ ಗಂಡನ ತಲೆಗೆ ರಕ್ತಸ್ರಾವ ಗಾಯವಾಗಿತ್ತು ಮತ್ತು ಆರೋಪಿತರು ಹೋಗುವಾಗ ನಮಗೆ ಬೈದಾಡಿ ಬೆದರಿಕೆ ಹಾಕಿ ಹೋದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

43. ಸದರಿ ಗಲಾಟೆಯನ್ನು ಚಾಸಾ-16 ರಿಂದ 18 ರವರು ಬಂದು ಬಿಡಿಸಿದರು ಮತ್ತು ಇದಾದ ನಂತರ ಗಾಯಾಳು ಮಲ್ಲಪ್ಪ ಹಾಗೂ ನನ್ನ ಗಂಡ ಆನಂದನನ್ನು ಚಿಕಿತ್ಸೆಗಾಗಿ 108 ಆ್ಯಂಬುಲೆನ್ಸದಲ್ಲಿ ಕರೆದುಕೊಂಡು ಹೋಗುವಾಗ ಮಲ್ಲಪ್ಪ ಮೃತಪಟ್ಟಿದ್ದು, ಚಾಸಾ-21 ನನ್ನ ಗಂಡನನ್ನು ಬಾಗಲಕೋಟೆ ಆಸ್ಪತ್ರೆಯಲ್ಲಿ ದಾಖಲು ಮಾಡಲಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

44. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ರಿಂದ 3 ಇವುಗಳು ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀಲವ್ವ ಮತ್ತು ಮಲ್ಲಪ್ಪನ ಸಾವಿಗೂ ಮತ್ತು ನನ್ನ ಗಂಡನಿಗೂ ಆದ ಗಾಯಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

## ಮರು ವಿಚಾರಣೆ - ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**